ದಿನಾಂಕಃ 09.07.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದ:**

**10.** ಪ್ರತಿವಾದಿಯ ತಂದೆಯ ಅಣ್ಣನ ಹೆಸರು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ಯಾವುದೇ ನಂಟಸ್ತಿಕೆ ಇಲ್ಲ ಎಂದರೆ ಸರಿ. ಪ್ರತಿವಾದಿಯ ಹೆಸರು ಬಿ.ಎಂ.ಚಂದ್ರಪ್ಪ ಎಂದರೆ ಸರಿ. ಪ್ರತಿವಾದಿಯ ತಂದೆಯ ಹೆಸರು ಮಂಜಯ್ಯ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಂಜಯ್ಯ ರವರಿಗೆ ಬಣಕಲ್ ಗ್ರಾಮದ ಸ.ನಂ.216 ರಲ್ಲಿ 2 ಎಕರೆ ಜಮೀನು ಮಂಜೂರಾಗಿದೆ ಎಂದರೆ ಸರಿಯಲ್ಲ. ಕಾಳಯ್ಯರವರ ಮಗ ಮಂಜಯ್ಯ ರವರಿಗೆ ಬಣಕಲ್ ಗ್ರಾಮದ ಸ.ನಂ.450 ರಲ್ಲಿ 1 ಎಕರೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನ ಖಾತೆ ಅಕ್ರಮವಾಗಿ ಬಿಳಗಮ್ಮ ಎನ್ನುವವರ ಹೆಸರಿಗೆ ದಾಖಲಾಗಿದೆ ಎಂದರೆ ನನಗೆ ನೆನಪಿಲ್ಲ. ದಾವ ಜಮೀನು ಪಕ್ಕಾ ಪೋಡಿಯಾಗಿಲ್ಲ ಎಂದರೆ ಸರಿಯಲ್ಲ. ಆ ರೀತಿ ಯಾವ ವರ್ಷದಲ್ಲಿ ಪಕ್ಕಾ ಪೋಡಿಯಾಯಿತು ಎಂದು ನನಗೆ ನೆನಪಿಲ್ಲ. ಪಕ್ಕಾ ಪೋಡಿಯ ಬಾಬ್ತು ದಾಖಲೆಯನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪೋಡಿ ಸ್ಕೆಚ್ ಅನುಮೋಧನೆಯಾಗಿರುವ ವಿಷಯ ನನಗೆ ಗೊತ್ತು. ಈ ಸಂಬಂಧ ದಾಖಲೆಗಳನ್ನು ಪಡೆದಿದ್ದೇನೆ.

**11.** ಪ್ರತಿವಾದಿಗೆ ಸೇರಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ತಿಮ್ಮಯ್ಯ ಎನ್ನುವ ಹೆಸರನ್ನು ವಾದಪತ್ರದಲ್ಲಿ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಯ್ಯ ಎನ್ನುವವರಿಗೆ 'K' ಎಂಬ ಇನಿಷಿಯಲ್ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಸ.ನಂ.216 ರಲ್ಲಿ 2 ಎಕರೆ ಜಮೀನನ್ನು ಅಕ್ರಮ ಸಕ್ರಮದಡಿ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವಾಧೀನದಲ್ಲಿ ಇರುವ ಸ.ನಂ.216 ರಲ್ಲಿನ 2 ಎಕರೆ ಜಮೀನಿನಲ್ಲಿ ಅವರು ಕಾಫೀ ಮತ್ತು ಮೆಣಸು ಬೆಳೆದಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಯ ಮನೆಗೆ ನುಗ್ಗಿ ಅವರ ತಂದೆಗೆ ಸಂಬಂಧಪಟ್ಟ ಸಾಗುವಳಿ ಚೀಟಿಯನ್ನು ಕಳ್ಳತನ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂಧಪಟ್ಟ ಜಮೀನನ್ನು ವಾದಿಯು ಕಬಳಿಸಲು ಪ್ರಯತ್ನಿಸಿದ್ದು ಅದು ಸಾಧ್ಯವಾಗದೇ ಇರುವಾಗ ಈ ದಾವೆಯನ್ನು ಸಲ್ಲಿಸಿ ನನ್ನ ಮೂಲಕ ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ವ್ಯಾಜ್ಯ ಕಾರಣದ ಆಧಾರದ ಮೇಲೆ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.